

# ಹಸಿರು ಜೇಡ



■ ಬಿ.ಸೋಮಶೇಖರ ಸುರಪುರ
ಚಿತ್ರ: ನೀಲಕಂಠ ಸ್ವಾಮಿ

ಜೇಡ ಎಂದಾಕ್ಷಣ, ಬಲೆಯ ಚಿತ್ರಗಳೇ ನಮ್ಮ ಮನದ ಗೋಡೆಯ ಮೇಲೆ 'ಸ್ಲೈಡ್‌ಶೋ' ನಡೆಸುತ್ತವೆ. ಅದು ಬಲೆಗಳನ್ನು ಹೆಣೆಯುವ ಶೈಲಿ, ಪಡುವ ಪಡಿಪಾಟಲು, ಪರಿಶ್ರಮ, ಅದರಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವ ರೀತಿ–ಎಲ್ಲವೂ ಅಗಾಧವಾದುದು. ಆದರೆ ಇಷ್ಟೆಲ್ಲ ಕಲಿತ ಆ ಜೇಡ ತಾನೇ ಹೆಣೆದ ಚಕ್ರವ್ಯೂಹವನ್ನು ಮಾತ್ರ ಭೇದಿಸಲು ಸಾಧ್ಯವಾಗುವುದಿಲ್ಲ ಎನ್ನುವುದು ವಿಪರ್ಯಾಸ.

ಸಾಮಾನ್ಯ ಜೇಡಗಳ ಬಗ್ಗೆ ಎಲ್ಲರಿಗೂ ಗೊತ್ತು. ಇಲ್ಲಿ ಹೇಳಹೊರಟಿರು–ವುದು ಜೇಡಗಳಲ್ಲಿಯೇ ವಿಶಿಷ್ಟವಾದ, ತಿಳಿದುಕೊಂಡಷ್ಟೂ ಕುತೂಹಲ ಕೆರಳಿಸುವ ಹಸಿರು ಜೇಡಗಳ ಕುರಿತು!

ಗಂಡು ಜೇಡವು ಅಂದಾಜು ನಾಲ್ಕು ಮಿಲಿ ಮೀಟರ್ ಮತ್ತು ಹೆಣ್ಣು ಜೇಡವು 10 ಮಿ.ಮೀ ಗಾತ್ರವನ್ನು ಹೊಂದಿರುತ್ತದೆ. ಹಸಿರು ಜೇಡಗಳು ಏಪ್ರಿಲ್‌ನಿಂದ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಇವುಗಳ ಹೊಟ್ಟೆಯ ಭಾಗವು ಹಸಿರು ಬಣ್ಣದಿಂದ ಕೂಡಿದ್ದರೆ, ತಲೆಯು ಹಳದಿ ಅಥವಾ ಕೆಂಪು ಬಣ್ಣದಿಂದ ಕೂಡಿರುತ್ತವೆ. ಎಂಟು ಕಾಲುಗಳನ್ನು ಹೊಂದಿದ್ದು ಹೆಸರೇ ಸೂಚಿಸುವಂತೆ ಇವುಗಳ ವಾಸವು ಯಾವುದೇ ಹಸಿರು ಗಿಡ–ಮರಗಳ ಮೇಲೆಯೇ ಇರುತ್ತದೆ. ಮರಗಿಡಗಳ ಸುತ್ತ ಹರಿದಾಡುವ ಕ್ರಿಮಿ ಕೀಟಗಳು ಹಸಿರು ಜೇಡಗಳ ಆಹಾರವಾಗಿದ್ದು, ಇವು ಪಕ್ಕಾ ಮಾಂಸಹಾರಿಗಳು.

Peucetia viridans ಎಂಬುದು ಈ ಹಸಿರು ಜೇಡಗಳ ವೈಜ್ಞಾನಿಕ ಹೆಸರಾಗಿದ್ದು ಅವುಗಳಲ್ಲೂ ಅನೇಕ ಪ್ರಭೇದಗಳಿವೆ. ಭಾರತದಲ್ಲಿ ಈ ಹಸಿರು ಜೇಡಗಳು ಕಾಣಸಿಗುತ್ತವಾದರೂ, ಉತ್ತರ ಅಮೆರಿಕಾದಲ್ಲಿ ಹೇರಳವಾಗಿ ಕಂಡುಬರುತ್ತವೆ. ಹಾಗೆಯೇ ಸ್ಪೇನ್, ದಕ್ಷಿಣ ಆಫ್ರಿಕಾ, ವೆಸ್ಟ್‌ಇಂಡೀಸ್, ವೆನುಜುವೆಲ, ಮ್ಯಾನ್ಮಾರ್ ಮುಂತಾದ ದೇಶಗಳಲ್ಲೂ ಈ ಹಸಿರು ಜೇಡಗಳು ಹೆಚ್ಚಾಗಿವೆ. ಅಂಟಾರ್ಟಿಕ ಖಂಡವನ್ನು ಹೊರತುಪಡಿಸಿ ಉಳಿದೆಲ್ಲಾ ಖಂಡಗಳಲ್ಲಿಯೂ ಇದು ಕಂಡು ಬರುತ್ತದೆ.

ಈ ಜೇಡಗಳು ಒಂದಲ್ಲ, ಎರಡಲ್ಲ; ಬರೋಬ್ಬರಿ ಎಂಟು ಕಣ್ಣುಗಳನ್ನು ಹೊಂದಿರುತ್ತವೆ. ಒಮ್ಮೆಲ್ಲೇ 500– 600 ಮೊಟ್ಟೆಗಳನ್ನು ಇಡುತ್ತವೆ. ಜೇನುನೊಣಗಳನ್ನು ಬೇಟೆಯಾಡಿ ತಿನ್ನುವುದೆಂದರೆ ಇವುಗಳಿಗೆ ಪಂಚಪ್ರಾಣ. ಅದೇ ಇವುಗಳಿಗೆ ಬಿರಿಯಾನಿ!

ಇವು ಅಲ್ಪ ವಿಷಪೂರಿತ ಜೇಡಗಳಾಗಿದ್ದರೂ, ಮನುಷ್ಯರಿಗೆ ಕಚ್ಚುವುದು ತುಂಬಾ ವಿರಳ. ಒಂದು ವೇಳೆ ಕಚ್ಚಿದರೆ ವಿಪರೀತ ನೋವಾಗುತ್ತದೆ. ಆದರೆ ಪ್ರಾಣಕ್ಕೆ ಅಪಾಯವಿಲ್ಲ.